# CHAPTER -9

**ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.**

**1. ಆಧುನಿಕ ತಳಿ ವಿಜ್ಞಾನದ ಪಿತಾಮಹ ಎಂದು ಇವರನ್ನು ಕರೆಯುತ್ತಾರೆ.**

A) ಮೆಂಡಲೀವ್ B) ನ್ಯೂಟನ್ C) ಮೆಂಡಲ್ D) ಮೈಕಲ್ ಫ್ಯಾರಡೆ

**2. ಏಕತಳೀಕರಣದ ವ್ಯಕ್ತರೂಪ ಅನುಪಾತವನ್ನು ಶೇಕಡದಲ್ಲಿ ಬರೆದಾಗ**

A) 75:25 B) 25:75 C) 50:50 D) 80:20

**3. F1 ತಳಿಯಲ್ಲಿ ಯಾವಾಗಲೂ ಈ ಗುಣ ಮಾತ್ರ ವ್ಯಕ್ತವಾಗುತ್ತದೆ.**

A) ದುರ್ಬಲ B) ತಟಸ್ಥ C) ಪ್ರಬಲ D) ಎಲ್ಲವೂ

| ಲಿಂಗಾಣು ಗಳು | T | t |
|---|---|---|
| T | TT | Tt |
| t | Tt | X |

**4. ಮುಂದಿನ ಪುನೆಟ್ ಚೌಕವನ್ನು ಗಮನಿಸಿ, X ಸ್ಥಾನದಲ್ಲಿ ಇದನ್ನು ಬರೆಯಬೇಕು**

A) Tt B) TT C) tt D) ಯಾವುದು ಅಲ್ಲ

**5. ತಂದೆಯಿಂದ ಅನುವಂಶೀಯವಾಗುವ ಈ ವರ್ಣತಂತು ಗಂಡು ಮಗುವಿನ ಜನನಕ್ಕೆ ಕಾರಣವಾಗುವುದು.**

A) X B) Y C) XX D) ಎಲ್ಲವೂ

**6. ಗುಣಗಳ ಅನುವಂಶೀಯತೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ.**

A) ಜೀವಿತಾವಧಿಯಲ್ಲಿ ಜೀವಿಯು ಪಡೆದ ಅನುಭವಗಳ ವರ್ಗಾವಣೆಯಿಂದ

B) ಅಲೈಂಗಿಕ ಅಂಗಾಂಶ/ ಅಂಗದಲ್ಲಾಗುವ ಬದಲಾವಣೆಯಿಂದ

C) DNA ಸ್ವಪ್ರತೀಕರಣ ಸಂದರ್ಭದಲ್ಲಿನ ಭಿನ್ನತೆಗಳು D) ಯಾವುದೂ ಅಲ್ಲ

**7. ಹಕ್ಕಿಯ ರೆಕ್ಕೆ ಮತ್ತು ಬಾವಲಿಯ ರೆಕ್ಕೆಗಳು ಈ ವಿಧದ ಅಂಗಗಳಿಗೆ ಉದಾಹರಣೆಯಾಗಿವೆ.**

A) ರಚನಾನರೂಪಿ ಅಂಗಗಳು B) ಕಾರ್ಯಾನುರೂಪಿ ಅಂಗಗಳು

C) ಮೂಲರೂಪಿ ಅಂಗಗಳು D) ಎಲ್ಲವೂ

**8. ಸತ್ತ ಜೀವಿಗಳ ಸಂರಕ್ಷಿಸಲ್ಪಟ್ಟ ಅವಶೇಷಗಳಿಗೆ ಹೀಗೆಂದು ಕರೆಯುವರು.**

A) ಉಳಿಕೆ B) ಪಳೆಯುಳಿಕೆ C) ಸಂರಕ್ಷಣೆ D) ದಿಕ್ಸೂಚಿ

**9. ಪಳೆಯುಳಿಕೆಗಳ ಕಾಲ ನಿರ್ಣಯ ಮಾಡಲು ಈ ಸಮಸ್ಥಾನಿಯನ್ನು ಬಳಸುತ್ತಾರೆ.**

A) ಕಾರ್ಬನ್ B) ಸಿಲಿಕಾನ್ C) ರಂಜಕ D) ಯುರೇನಿಯಂ

**10. ಎಲ್ಲಾ ಮಾನವರು ಈ ಪ್ರಭೇದಕ್ಕೆ ಸೇರಿದವರು.**

A) ಹೋಮಿನಿಡೆ B) ಪ್ರೈಮೇಟ್ C) ಹೋಮೋ ಸೆಪಿಯನ್ D) ಎಲ್ಲವೂ

LIVEWORKSHEETS